ಕರ್ನಾಟಕ ಸರ್ಕಾರ

ಸಾರ್ವಜನಿಕ ಗ್ರಂಥಾಲಯ ಇಲಾಖೆ

ಸಂ.ಸಾಗ್ರಂಇ/ನಿಕ/ಮುಖವಿ/ಪಪ್ರ/2016ಪ್ರ/9/2016-17

ನಿರ್ದೇಶಕರ ಕಛೇರಿ,
ವಿಶ್ವೇಶ್ವರಯ್ಯ ಮುಖ್ಯ ಗೋಪುರ
4ನೇ ಮಹಡಿ, ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು-560 001,
ದಿನಾಂಕ: 04-01-2017.

: ಪ್ರಕಟಣೆ :

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳಿಗೆ ವಿವಿಧ ಯೋಜನೆಯಡಿ 2016ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಪುಸ್ತಕಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಸಲ್ಲಿಸುವ ಬಗ್ಗೆ.

*****

2016ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಸಾಹಿತ್ಯ/ಲಲಿತಕಲೆ/ವಿಜ್ಞಾನ/ಮಾನವಿಕ/ವೈದ್ಯಕೀಯ/ತಾಂತ್ರಿಕ/ಪರಾಮರ್ಶನ ಕೃತಿಗಳು ಹಾಗೂ ಮಕ್ಕಳ ಸಾಹಿತ್ಯ/ನವಸಾಕ್ಷರರ ಕೃತಿಗಳು ಇತ್ಯಾದಿ ವಿಷಯಗಳ ಕನ್ನಡ/ಆಂಗ್ಲ/ಇತರೆ ಭಾರತೀಯ ಭಾಷೆಯ ಗ್ರಂಥಗಳ ಆಯ್ಕೆಗೆ ಲೇಖಕರು, ಲೇಖಕ-ಪ್ರಕಾಶಕರು, ಪ್ರಕಟಣಾ ಸಂಸ್ಥೆಗಳು ಹಾಗೂ ವಿತರಕರಿಂದ ಪುಸ್ತಕಗಳನ್ನು ಆಹ್ವಾನಿಸಿದೆ. ಪುಸ್ತಕಗಳು ಈ ಕೆಳಗೆ ತಿಳಿಸಿದ ನಿಬಂಧನೆಗಳಿಗೆ ಅನುಗುಣವಾಗಿರಬೇಕು.

1. ಪುಸ್ತಕಗಳು ಪ್ರಥಮ ಮುದ್ರಣವಾಗಿ ಪ್ರಕಟವಾಗಿರಬೇಕು/ಮರುಮುದ್ರಣವಾದಲ್ಲಿ. ಹತ್ತು ವರ್ಷಗಳ ಅಂತರವಿರಬೇಕು. ಈ ಬಗ್ಗೆ ದೃಢೀಕರಣ ಪತ್ರವನ್ನು ನೀಡಬೇಕು.

2. ಪುಸ್ತಕದ ಶೀರ್ಷಿಕೆ, ಗ್ರಂಥಕರ್ತರ ಹೆಸರು, ಪ್ರಕಾಶಕರ ಹೆಸರು, ಪುಟ ಸಂಖ್ಯೆ, ಪ್ರಕಟಣೆಯ ವರ್ಷ, ಆವೃತ್ತಿಯ ಎಲ್ಲಾ ವರ್ಷಗಳ ವಿವರ, ಮುಖ ಬೆಲೆಗಳನ್ನು ಸ್ಪಷ್ಟವಾಗಿ ಮುದ್ರಿಸಿರಬೇಕು. ಇವುಗಳಲ್ಲಿ ತಾಂತ್ರಿಕ ಲೋಪದೋಷಗಳು ಏನಾದರೂ ಇದ್ದಲ್ಲಿ ತಿರಸ್ಕರಿಸುವ ಹಕ್ಕು ಆಯ್ಕೆ ಸಮಿತಿಗೆ ಇದೆ. ಪ್ರಸ್ತುತ ವರ್ಷದಲ್ಲಿಯೇ ಕೃತಿ ಮೊದಲ ಮುದ್ರಣವಾಗಿದೆ ಎಂಬ ಬಗ್ಗೆ ಮರುಮುದ್ರಣಕ್ಕೆ ಹತ್ತು ವರ್ಷಗಳ ಅಂತರವಿದೆ ಎಂಬ ಬಗ್ಗೆ ಕಡ್ಡಾಯವಾಗಿ ಮುಚ್ಚಳಿಕೆ ಪತ್ರವನ್ನು ನೀಡತಕ್ಕದ್ದು. ಸುಳ್ಳು ಮಾಹಿತಿ ನೀಡಿದಲ್ಲಿ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

3. ಪುಸ್ತಕ ಖರೀದಿಗೆ ನಿಗದಿಯಾದ ಮೊತ್ತದಲ್ಲಿ ಶೇ.80 ರಷ್ಟು ಕನ್ನಡ ಪುಸ್ತಕಗಳು (ಎಲ್ಲಾ ವಿಷಯಗಳು ಸೇರಿ) ಶೇ.20 ರಷ್ಟು ಆಂಗ್ಲ ಭಾಷೆಯ ಪುಸ್ತಕಗಳು ಹಾಗೂ ಇತರೆ ಭಾರತೀಯ ಭಾಷೆಯ ಪುಸ್ತಕಗಳನ್ನು ಆಯ್ಕೆ ಮಾಡಲು ಅವಕಾಶವಿರುವುದರಿಂದ ನಿಯಾಮಾವಳಿಗಳಿಗೆ ಒಳಪಟ್ಟು ಪುಸ್ತಕಗಳನ್ನು ಸಲ್ಲಿಸಬಹುದು. ಭಾರತದಲ್ಲಿ ಪ್ರಕಟವಾದ ಆಂಗ್ಲ ಪುಸ್ತಕಗಳಿಗೆ ಆದ್ಯತೆ ಇರುತ್ತದೆ.

4. ಮೂವತ್ತೆರಡು ಪುಟಕ್ಕಿಂತ ಕಡಿಮೆ ಪುಟಗಳಿರುವ ಪುಸ್ತಕಗಳನ್ನು ತಿರಸ್ಕರಿಸಲಾಗುವುದು (ಮಕ್ಕಳ ಪುಸ್ತಕ, ಎನ್.ಬಿ.ಟಿ. ಹಾಗೂ ನವಸಾಕ್ಷರತೆ ಸಾಹಿತ್ಯಕ್ಕೆ ಅನ್ವಯಿಸುವುದಿಲ್ಲ)

5. ಲೇಖಕರೇ ಪ್ರಕಾಶಕರಾಗಿದ್ದಲ್ಲಿ ಅವರೇ ಅರ್ಜಿ ಸಲ್ಲಿಸಬೇಕು.

6. ಪುಸ್ತಕಗಳನ್ನು ಪ್ರಕಟಿಸುವ ಪ್ರಕಾಶಕರು ಅಥವಾ ಅವರ ಅನುಮತಿಯನ್ನು ಅಧಿಕೃತವಾಗಿ ಪಡೆದ ಪುಸ್ತಕ ವ್ಯಾಪಾರಿಗಳು ಮಾತ್ರ ಅರ್ಜಿ ಸಲ್ಲಿಸಬೇಕು.

7. ನ್ಯೂಸ್ ಪ್ರಿಂಟ್ ಅಥವಾ ಇತರೆ ಅಗ್ಗದ ಕಾಗದದಲ್ಲಿ ಮುದ್ರಿಸಿರುವ ಪುಸ್ತಕಗಳನ್ನು ತಿರಸ್ಕರಿಸಲಾಗುವುದು.

8. ಆಯ್ಕೆಗೆ ಒಪ್ಪಿಸಿದ ಯಾವುದೇ ಭಾಷೆಯ ಗ್ರಂಥಗಳನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸುವುದಿಲ್ಲ.

9. ಲೇಖಕರು/ಪ್ರಕಾಶಕರು/ಸಂಸ್ಥೆಗಳು ತಾವು ಪ್ರಕಟಿಸಿದ ಪುಸ್ತಕಗಳನ್ನು ಬೆಂಗಳೂರಿನ ರಾಜ್ಯ ಕೇಂದ್ರ ಗ್ರಂಥಾಲಯದಲ್ಲಿ ಗ್ರಂಥಸ್ವಾಮ್ಯ(ಕಾಪಿರೈಟ್) ಕಾಯ್ದೆಯಡಿಯಲ್ಲಿ ಪ್ರತಿ ಗ್ರಂಥದ ಮೂರು ಪ್ರತಿಗಳನ್ನು ಮುಫತ್ತಾಗಿ ಸಲ್ಲಿಸಿ ನೋಂದಣೆಯನ್ನು ಮಾಡಿಸತಕ್ಕದ್ದು, ಆಯ್ಕೆಗಾಗಿ ಸಲ್ಲಿಸುವ ಪುಸ್ತಕದ ಕೊನೆಯ ಪುಟದಲ್ಲಿ ನೋಂದಣಿ ಪತ್ರದ ನಕಲನ್ನು ಕಡ್ಡಾಯವಾಗಿ ಅಂಟಿಸಿರಬೇಕು. ಇಲ್ಲದೇ ಇದ್ದಲ್ಲಿ ಅಂತಹ ಗ್ರಂಥಗಳನ್ನು ತಿರಸ್ಕರಿಸುವ ಹಕ್ಕು ಆಯ್ಕೆ ಸಮಿತಿಯದಾಗಿರುತ್ತದೆ.

10. ನಮೂನೆ ನಿಯಮಿತ ಅರ್ಜಿಯಲ್ಲಿ (ಅರ್ಜಿ ನಮೂನೆಯು ರಾಜ್ಯ ಎಲ್ಲಾ ನಗರ/ಜಿಲ್ಲಾ ಕೇಂದ್ರ ಗ್ರಂಥಾಲಯಗಳಲ್ಲಿ ದೊರೆಯುತ್ತದೆ) ಸ್ವಲಿಖಿತ ಅರ್ಜಿಯಲ್ಲಿ 1. ಪುಸ್ತಕದ ಶೀರ್ಷಿಕೆ, 2. ಲೇಖಕರ ಹೆಸರು ಖಾಯಂ ಅಂಚೆ ವಿಳಾಸ, 3. ಪ್ರಕಾಶಕರ ಹೆಸರು ಮತ್ತು ಪೂರ್ಣ ವಿಳಾಸ (ಪುಸ್ತಕದ ಹಕ್ಕು ಹೊಂದಿರುವ ಬಗ್ಗೆ ಮಾಹಿತಿ ಒದಗಿಸುವುದು) 4. ಗ್ರಂಥಸ್ವಾಮ್ಯ ನೋಂದಣಿ ಸಂಖ್ಯೆ ಮತ್ತು ವರ್ಷ 5. ಪ್ರಥಮ ಮುದ್ರಣದ ವರ್ಷ 6. ಪುಸ್ತಕದ ಮುಖ ಬೆಲೆ, (ಸ್ಪಷ್ಟವಾಗಿ ಮುದ್ರಿತಗೊಂಡಿರಬೇಕು, ತಿದ್ದಿದಲ್ಲಿ, ಸ್ಟಿಕರ್ ಅಂಟಿಸಿದಲ್ಲಿ, ಅಂತಹ ಪುಸ್ತಕಗಳನ್ನು ಪರಿಗಣಿಸುವುದಿಲ್ಲ) 7. ಸಾಮಾನ್ಯ ಪ್ರತಿ / ಉತ್ತಮ ಪ್ರತಿ, 8. ಪುಟ ಸಂಖ್ಯೆ, 9. ತರ್ಜುಮೆಗೊಳಿಸಲಾದ ಕೃತಿಯೇ, ಹಾಗಿದ್ದಲ್ಲಿ (ಅ) ವರ್ಷ (ಆ) ಯಾವ ಭಾಷೆ (ಇ) ಯಾರಿಂದ (ಈ) ಸಂಬಂಧಿಸಿದವರಿಂದ ಅನುಮತಿ ಪಡೆಯಲಾಗಿದೆಯೇ ಎಂಬ ಮಾಹಿತಿಯನ್ನು ನೀಡತಕ್ಕದ್ದು. ಮೇಲ್ಕಂಡ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ದೃಢೀಕರಿಸುವುದು.

11. ಆಯ್ಕೆಯಾದ ಪುಸ್ತಕಗಳಿಗೆ ಸರ್ಕಾರ ನಿಗದಿಪಡಿಸಿದ ಬೆಲೆಯ ಆಧಾರದ ಮೇಲೆ ಬೆಲೆಯನ್ನು ನಿಗದಿಪಡಿಸಲಾಗುವುದು.

12. ಎರಡನೇ ಹಂತದ ಸ್ವೀಕೃತಿ : (01-10-2016 ರಿಂದ 31-12-2016 ರವರೆಗೆ) ಎರಡನೇ ಹಂತದಲ್ಲಿ 01-10-2016 ರಿಂದ 31-12-2016 ರವರೆಗೆ 2016ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಪುಸ್ತಕಗಳನ್ನು ಗ್ರಂಥಸ್ವಾಮ್ಯ ವಿಭಾಗ, ರಾಜ್ಯ ಕೇಂದ್ರ ಗ್ರಂಥಾಲಯ, ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ದಿನಾಂಕ: 20-02-2017 ರ ಒಳಗೆ ಕಾಪಿರೈಟ್ ಮಾಡಿಸಿರತಕ್ಕದ್ದು, ಕಾಪಿರೈಟ್ ಮಾಡಿಸಿರುವ ಪುಸ್ತಕಗಳನ್ನು ಆಯ್ಕೆಗಾಗಿ ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನು (ನೋಂದಣಿ ಪತ್ರದ ಪ್ರತಿಯೊಂದಿಗೆ) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇಲ್ಲಿಗೆ ದಿನಾಂಕ: 05-01-2017 ರಿಂದ 20-02-2017 ರವರಗೆ ಸಂಜೆ 5-30ರ ಒಳಗಾಗಿ ಸಲ್ಲಿಸುವುದು. ತದನಂತರ ಬಂದ ಯಾವುದೇ ಪುಸ್ತಕಗಳನ್ನು ಸ್ವೀಕರಿಸಲಾಗುವುದಿಲ್ಲ. ನಿಗದಿತ ಅರ್ಜಿ ನಮೂನೆ ಮತ್ತು ನಿಬಂಧನೆಗಳನ್ನು ಇಲಾಖಾ ಅಂತರ್ಜಾಲ www.karnatakapubliclibrary.gov.in ಹಾಗೂ ರಾಜ್ಯದ ಎಲ್ಲಾ ಜಿಲಾ/ನಗರ ಕೇಂದ್ರ ಗ್ರಂಥಾಲಯಗಳ ಉಪನಿರ್ದೇಶಕರು/ಮುಖ್ಯಗ್ರಂಥಾಲಯಾಧಿಕಾರಿಗಳ ಕಛೇರಿಗಳಲ್ಲಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ 22864990, 22867358 ಸಂಪರ್ಕಿಸಲು ಕೋರಿದೆ.

13. ಆಯ್ಕೆಗಾಗಿ ಸಲ್ಲಿಸುವ ಗ್ರಂಥಗಳ ಶೀರ್ಷಿಕೆ ಪುಟದ ಹಿಂಭಾಗದ ಪುಟದಲ್ಲಿ (imprint page) ಈ ಕೆಳಗಿನ ಅಂಶಗಳನ್ನು ಮುದ್ರಿಸುವುದು ಕಡ್ಡಾಯವಾಗಿರುತ್ತದೆ.
ಶೀರ್ಷಿಕೆ, ಲೇಖಕರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಪುಟಗಳು, ಪುಸ್ತಕದ ಅಳತೆ, ಉಪಯೋಗಿಸಿರುವ ಕಾಗದ,ಗ್ರಂಥಸ್ವಾಮ್ಯದ ಹಕ್ಕು, ಪ್ರಥಮ ಮುದ್ರಣ, ನಂತರದ ಎಲ್ಲಾ ಮುದ್ರಣಗಳ ಬೆಲೆ, ವರ್ಷಗಳು, ಮುಖಪುಟ, ವಿನ್ಯಾಸ, ಒಳಪುಟ, ರೇಖಾಚಿತ್ರ, ಪ್ರಕಾಶಕರು ಮತ್ತು ಮುದ್ರಕರು ಅವರ ವಿಳಾಸಗಳನ್ನು ಮುದ್ರಿಸಿರಬೇಕು.

**ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು**

1. ಪುಸ್ತಕದ ಒಂದು ಪ್ರತಿ
2. ಕಾಪಿರೈಟ್‌ನ ನೋಂದಣಿಯ ಸ್ವಯಂ ದೃಢೀಕರಿಸಿದ ನಕಲುಪ್ರತಿ.
3. ಕೃತಿಯು ಮರುಮುದ್ರಣವಾದಲ್ಲಿ 10 ವರ್ಷಗಳ ಅಂತರವಿದೆ ಎಂಬ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸುವುದು.

ಈ ಮೇಲ್ಕಂಡ ದಾಖಲಾತಿಗಳು ಇಲ್ಲದಿದ್ದಲ್ಲಿ ಪುಸ್ತಕವನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ನಿರ್ದೇಶಕರು
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಹಾಗೂ ಸದಸ್ಯ ಕಾರ್ಯದರ್ಶಿಗಳು
ಉನ್ನತ ಮಟ್ಟದ ಪುಸ್ತಕ ಆಯ್ಕೆ ಸಮಿತಿ,
ಬೆಂಗಳೂರು.

ಎಸ್* Bos.Prakatane

ಕರ್ನಾಟಕ ಸರ್ಕಾರ

ಸಾರ್ವಜನಿಕ ಗ್ರಂಥಾಲಯ ಇಲಾಖೆ

ನಿರ್ದೇಶಕರ ಕಚೇರಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ,ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-560 001.

## ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ವಿವಿಧ ಯೋಜನೆಗಳಲ್ಲಿ ಪುಸ್ತಕ ಖರೀದಿಗೆ ಆಯ್ಕೆಗಾಗಿ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಸಲ್ಲಿಸುವ ಪರಿಷ್ಕೃತ ಅರ್ಜಿ ನಮೂನೆ

ಅರ್ಜಿದಾರರ ಇತ್ತೀಚಿನ ಭಾವಚಿತ್ರ

| | | | |
|---|---|---|---|
| 1. | | ಅರ್ಜಿದಾರರ ಹೆಸರು ಮತ್ತು ವಿಳಾಸ<br>ಸಂಚಾರಿ/ದೂರವಾಣಿ ಸಂಖ್ಯೆ (ಎಸ್.ಟಿ.ಡಿ. ಕೋಡ್ ಸಹಿತ) | ಪಿನ್‌ಕೋಡ್ |
| 2. | | ಪ್ರಕಾಶಕರು/ಸರಬರಾಜುದಾರರ ಹೆಸರು ಮತ್ತು ವಿಳಾಸ<br>ಸಂಚಾರಿ/ದೂರವಾಣಿ ಸಂಖ್ಯೆ (ಎಸ್.ಟಿ.ಡಿ. ಕೋಡ್ ಸಹಿತ) | ಪಿನ್‌ಕೋಡ್ |
| 3. | (a) | ಅರ್ಜಿದಾರರು ಪುಸ್ತಕದ ಲೇಖಕರೆ/ಪ್ರಕಾಶಕರೆ/ವಿತರಕರೆ ? | |
| | (b) | ಪುಸ್ತಕದ ಹಕ್ಕು | ಲೇಖಕರದು/ಪ್ರಕಾಶಕರದು |
| 4. | (a) | ಪುಸ್ತಕದ ಭಾಷೆ | |
| | (b) | ಪುಸ್ತಕದ ಶಿರೋನಾಮೆ | |
| | (c) | ಲೇಖಕರ ಹೆಸರು | |
| | (d) | ಸಂಪುಟಗಳ ಸಂಖ್ಯೆ (ಇದ್ದಲ್ಲಿ) | |
| | (e) | ಪುಸ್ತಕದ ವಿಷಯ | |
| 5. | | ಪ್ರಕಟಣಾ ವರ್ಷ | |
| 6. | | ಅನುವಾದವಾಗಿದ್ದಲ್ಲಿ ಮೂಲ ಲೇಖಕರ ಹೆಸರು ಮತ್ತು ಭಾಷೆ | |

| | | | |
|---|---|---|---|
| 7. | *(a)* | ಪುಸ್ತಕದ ಆಳತೆ | |
| | *(b)* | ಪುಟಗಳ ಸಂಖ್ಯೆ | |
| | *(c)* | ಬೈಂಡಿಂಗ್ | ಉತ್ತಮ / ಸಾಮಾನ್ಯ |
| | *(d)* | ಪುಸ್ತಕದ ಬೆಲೆ | ಉತ್ತಮ ಪ್ರತಿ ರೂ. . . . . . . . . . . .<br>ಸಾದಾ ಪ್ರತಿ ರೂ. . . . . . . . . . . . |
| | *(e)* | ಪುಸ್ತಕ ಮುದ್ರಿಸಲು ಬಳಸಿದ ಕಾಗದದ ಗುಣಮಟ್ಟ (ಜಿ.ಎಸ್.ಎಂ.ನಲ್ಲಿ ನಮೂದಿಸುವುದು) | |
| 8. | | ಗ್ರಂಥವು ಮರುಮುದ್ರಣಗೊಂಡಿದ್ದರೆ, ಮೊದಲ ಆವೃತ್ತಿಯ ವರ್ಷ | |
| 9. | | ಗ್ರಂಥಸ್ವಾಮ್ಯ ನೋಂದಣಿ ಸಂಖ್ಯೆ ಮತ್ತು ವರ್ಷ | |
| 10. | | ಅರ್ಜಿದಾರರು ಕಡ್ಡಾಯವಾಗಿ ಪ್ಯಾನ್‌ಸಂಖ್ಯೆ /ಟಿನ್/ ವ್ಯಾಟ್ ಸಂಖ್ಯೆಯನ್ನು ನಮೂದಿಸುವುದು. | |

## ಘೋಷಣೆ

ಶ್ರೀಮತಿ / ಶ್ರೀ ____________________ ಆದ ನಾನು, ಮೇಲೆ ದಾಖಲಿಸಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ. ತಪ್ಪಿದ್ದಲ್ಲಿ ಕಾನೂನಾತ್ಮಕವಾಗಿ ಇಲಾಖೆ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧನಾಗಿರುತ್ತೇನೆ.

ಸ್ಥಳ :

ದಿನಾಂಕ :

ಅರ್ಜಿದಾರರ ಸಹಿ & ಮೊಹರು

ಅರ್ಜಿದಾರರ ಹೆಸರು (                    )

**<u>ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು:</u>**

1. ಪ್ರತಿ ಶೀರ್ಷಿಕೆಗೆ ಸಂಬಂಧಿಸಿದಂತೆ ಪ್ರತ್ಯೇಕ ಅರ್ಜಿ ನಮೂನೆಯಲ್ಲಿ ವಿವರ ಸಲ್ಲಿಸುವುದು.
2. ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನು (ನೋಂದಣಿ ಪತ್ರದ ಪ್ರತಿಯೊಂದಿಗೆ) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು – 560 001 ಇಲ್ಲಿಗೆ ದಿನಾಂಕ: 05-01-2017 ರಿಂದ 20-02-2017 ರ ಸಂಜೆ 5.30 ಗಂಟೆ ಒಳಗಾಗಿ ಸಲ್ಲಿಸುವುದು. ನಂತರ ಬಂದ ಪುಸ್ತಕಗಳನ್ನು ಪರಿಗಣಿಸುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಸದರಿ ಕಛೇರಿಯನ್ನು ಸಂಪರ್ಕಿಸುವುದು. ದೂರವಾಣಿ ಸಂಖ್ಯೆ: 22864990 ಹಾಗೂ 22867358.

**ಯಾವುದೇ ವಿಷಯದಲ್ಲೂ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾದದ್ದು.**

ವ: *BOS/New book sel-format*